The Mysore Press

Mysore

WE UNDERTAKE TO PRINT

JOBS BOOKS & PERIODICALS

Neat Workmanship, Prompt Execution, Moderate Charges

Printed and Published by B. S. Murthy, B. A., at the Mysore Press, Mysore, for the Editor and Proprietor

ಬಿ ಡಿ ಪ್ರತಿ ೩ ಪೈ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0
ಒಂದು ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ ಪಿ. ಪದ್ಧತಿ ಇಲ್ಲ.
ಪ್ರಕಟಣೆ ದರವನ್ನು ಬೇಕಾದವರಿಗೆ ತಿಳಿಸುತ್ತೆ.

Office—Chamaraja Agrahara, Mysore
ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು

Regd. No. M. 1299.

SATYAVADI

"ಸತ್ಯವಾದಿ" ವಾರಪತ್ರಿಕ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೧೫ನೇ ಏಪ್ರಿಲ್ ೧೯೩೫. [ಸಂಚಿಕೆ ೧೭

೧೫೦೦ ರೂಪಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ
ಸಾಲಾಮಿಸ್ರ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವುದು. ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರ' ಎಂಬುವುದು ಕಾಬೂಲ್ ಕಾಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ವುಗಳು ಸುಳ್ಳು ಎಂದು ನಿರ್ಧರಪಡಿಸುವವ ಳೆ ಕಂಡ ಬಹುಮಾನವು ಕೊಡಲ್ಪ ಹಾಗೆ ಕೊಡದೆ ನಿರಾಕರಿಸಿ ಲಕ ಅದನ್ನು ಪಡೆಯ 15 ದಿವಸ ಸೇವಿಸಿ ಿ ತೋರಬಹುದು. ವಾಗಿ ಗುಣವ ನ ಪತ್ರಿಕೆಯು ರು ವಿಳಾಸ ು.

—0
ಬ್ಬಿಗಳಿಗೆ 8 ಳಗಳಲ್ಲಿಯೂ ಲ್ಸ್ ತರಿಸಿ

ರು ಸಿಟಿ.
ವೈದ್ಯರು,
ಪೊ

ಸೀಮೆ ಭಂಗಾತದ ಕೇಡಿಯಂ ರಿಸ್ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷನ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾಗುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡ ಬೇಕಾದರೆ ಬೆಳಕು ಆವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0.
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗ್ರಾಂಡ್ ಅಂಡ್ ಕೋ.,
ನಂ. 39 ಪರಪ್ಪಾಸಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದು ಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಸ್ವಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ, ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಪರಟತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—0—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಬೇಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD

For particulars apply to:—

THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ ಮತ್ತು ಕಂಪೆನಿ ಷೇರುಗಳನ್ನು ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯವರ ಸುಪ್ರಸಿದ್ಧ ಪುಸ್ತಕವಾದ 'ಸ್ಪೀಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನೆ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೇಯಿಂಟಿಂಗ್ ಎಂಗ್ರೇವಿಂಗ್‌ಮೆಂಟು ಕೆಲಸಗಳೂ, ಚಿತ್ರಪಟಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 15-12 ಸೈಜು ಎಂಗ್ರೇವಿಂಗ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣಾ ರವಾನಿಸಿ.

ವೈತ್ತಾಂತ ಸಂಗ್ರಹ

—0—

ಬೆಂಗಳೂರು ಸಿಟಿಯ ಮೂರನೇ ಡಿವಿಜನ್ನಿನಲ್ಲಿ ತೆರಿಗೆಯನ್ನು ಕೊಡತಕ್ಕವರ ಪ್ರತಿನಿಧಿಗಳು ಸದರಿ ಡಿವಿಜನ್ನಿನಲ್ಲಿ ವಾಸಮಾಡತಕ್ಕ ಪ್ರಜೆಗಳು ನೀರಿಗಾಗಿ, ಅದರಲ್ಲಿಯೂ ಈ ವರುಷದ ಬೇಸಿಗೆಯಲ್ಲಿ ನೀರಿಗಾಗಿ ಪಡುತ್ತಿರುವ ಕಷ್ಟವನ್ನು ದಿವಾಣರವರಲ್ಲಿ ಅರಿಕೆಮಾಡಿಕೊಳ್ಳುವುದಕ್ಕಾಗಿ ದಿವಾಣರವರ ಭೇಟಿಗಾಗಿ ಕಳೆದ ಸೋಮವಾರ ಪಬ್ಲಿಕ್ ಆಫೀಸಿನಲ್ಲಿ ಕಾದಿದ್ದರು. ನೀರನ್ನು ವಿನಿಯೋಗಿಸತಕ್ಕ ಈಗಿನ ಹೊಸಪದ್ಧತಿಯ ಮೇರೆಗೆ ಹಗಲಿನಲ್ಲಿ ಅಲ್ಲಿರತಕ್ಕ ನಲ್ಲಿಗಳಾವುದರಲ್ಲಿಯೂ ನೀರಿರುವುದಿಲ್ಲವೆಂಬುದಾಗಿಯೂ ರಾತ್ರಿವೇಳೆಯಲ್ಲಿ ಕೆಲವು ಮನೆಯ ನಲ್ಲಿಗಳಲ್ಲಿ ಮಾತ್ರ ಸಾಕಾದಷ್ಟು ನೀರಿರುವುದೆಂಬುದಾಗಿಯೂ, ಅಲ್ಲಿ ವಾಸಮಾಡತಕ್ಕವರ ಪೈಕಿ ಬಹುಮಂದಿ ಮಿಲ್ಲಿನಲ್ಲಿ ನೌಕರರಾಗಿರುವ ಕಾರಣ ನೀರನ್ನು ಕೂಡಿಟ್ಟುಕೊಳ್ಳಲು ಅವರಿಗೆ ಬಹುಕಷ್ಟವಾಗಿದೆ ಎಂಬುದಾಗಿಯೂ ಈ ಪ್ರತಿನಿಧಿಗಳು ಅರಿಕೆ ಮಾಡಿಕ್ಕೊಂಡರು. ಅವೆನ್ಯೂ ರೋಡಿನಲ್ಲಿರತಕ್ಕ ಮೆರ್ಸಿ ಪೈಪಿನಿಂದ ನೇರವಾಗಿ ನಲ್ಲಿಯನ್ನು ಹಾಕಿಕೊಳ್ಳುವುದಕ್ಕಾಗಿ ಸಲಹೆಮಾಡಲ್ಪಟ್ಟು ಆಂದಾಜು ತಯಾರಾಗಿದೆ ಎಂಬುದಾಗಿಯೂ, ಈ ಸಲುವಾಗಿ ಮ್ಯುನಿಸಿಪಾಲಿಟಿಯಿಂದ 8800 ರೂಪಾಯಿಗಳು ಮಂಜೂರಾಗಿದೆಯೆಂದೂ, ಇದಲ್ಲದೆ ಸದರಿ ಪೈಪುಗಳನ್ನು ಭದ್ರಾವತಿಯ ಕಬ್ಬಿಣದ ಕಾರ್ಖಾನೆಗಳಿಂದ ತೆಗೆದುಕೊಳ್ಳಬೇಕಾಗಿ ಸರ್ಕಾರದವರು ಹುಕುಂ ಮಾಡಿರುವಕಾರಣ, ಸದರಿ ಪೈಪನ್ನು ಹಾಕಲು ಕನಿಷ್ಟಪಕ್ಷ ಇನ್ನೂ ಮೂರು ತಿಂಗಳುಗಳ ಕಾಲವಾಗುವುದೆಂದೂ ಅವರು ದಿವಾಣರವರಲ್ಲಿ ಹೇಳಿದರು. ಅನಿವಾರ್ಯಗಳು ಈ ರೀತಿ ಇರುವಕಾರಣ, ಪೈಪುಗಳನ್ನು ಇಲ್ಲಿಯೇ ಕೊಂಡುಕ್ಕೊಂಡು ಈ ಕೆಲಸವನ್ನು ಹದಿನೈದು ದಿನಗಳೊಳಗಾಗಿ ಪೂರೈಸಿಕೊಡಬೇಕಾಗಿ ಅವರುಗಳು ದಿವಾಣರವರನ್ನು ಕೇಳಿಕೊಂಡರು. ಇವೆಲ್ಲವನ್ನೂ ದಿವಾಣರವರು ಸಾವಧಾನವಾಗಿ ಕೇಳಿದರಲ್ಲದೆ, ಈ ಕೆಲಸವನ್ನು ಜಾಗ್ರತೆಯಾಗಿ ನಡೆಸುವುದಕ್ಕೆ ತಾವು ಗಮನಕೊಡುವುದಾಗಿಯೂ, ಸದರಿ ಪ್ರದೇಶವನ್ನು ಪರಿಶೀಲಿಸಿ ವಿಶೇಷವಾದ ತರದಿಯೊಂದನ್ನು ಮಾಡುವುದಕ್ಕಾಗಿ ಚೀಫ್ ಇಂಜಿನಿಯರನ್ನು ಕಳುಹಿಸಿಕೊಡುವುದಾಗಿಯೂ ಅಪ್ಪಣೆ ಕೊಟ್ಟಿರುತ್ತಾರೆ.

ಕಲ್ಕತ್ತಾದಲ್ಲಿ ಈಚೆಗೆ ಒಂದು ಚರಕ ವಾತಶಾಲೆ ಸ್ಥಾಪನೆಯಾಗಿದೆಯಂತೆ.

ಮೈಸೂರಿನಲ್ಲಿ ಒಂದು ಖಾದೀ ಕೋ ಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಬೇಕೆಂದು ಕೆಲ ಮಹನೀಯರು ಏರ್ಪಡಿಸಿದ್ದಕೆಂದೂ, ಕೋ ಆಪರೇಟಿವ್ ಸೊಸೈಟಿ ರೆಜಿಸ್ಟ್ರಾರ್‌ರವರು ಈ ಸೊಸೈಟಿಯು ಲಾಭಕರವಾದುದಲ್ಲವೆಂದೂ ಸೂಚಿಸಿ, ರಿಜಿಸ್ಟರ್ ಮಾಡಲು ಒಪ್ಪಲಿಲ್ಲವೆಂದೂ, ಈಗ ಈ ವಿಷಯದಲ್ಲಿ ಸರ್ಕಾರಕ್ಕೆ ಮನವಿಮಾಡಲಾಗಿದೆಯೆಂದೂ ತಿಳಿಯಬಂದಿದೆ.

ಖಾದೀಬಟ್ಟೆ ತಯಾರಿನವರ ಅನುಕೂಲಕ್ಕೆ ಹತ್ತಿ ಚರಕ, ಖಾದಿ, ನೂಲಿನ ಆಧಾರದಮೇಲೆ ಸಾಲ ಕೊಡಲು, ಗುಂಟೂರಿನಲ್ಲಿ ಒಂದು ಬ್ಯಾಂಕು ಸ್ಥಾಪಿಸುವ ಏರ್ಪಾಡು ನಡೆಯುತ್ತಿದೆ.

ಕಲ್ಕತ್ತ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ಒಬ್ಬ ಕ್ರಿಶ್ಚಿಯರ್ ಹುಡುಗನು ಯಾವುದೋ ಒಂದು ತಪ್ಪಿತಕ್ಕಾಗಿ ವಿಚಾರಣೆಗೆ ಒಯ್ಯಲ್ಪಟ್ಟಿದ್ದನು. ಆ ಹುಡುಗನು ಆಗ " ಕ್ರಿಶ್ಚಿಯನ್ನನು ಸುಳ್ಳು ಹೇಳುತ್ತಾನೆ; ಪೇವರೆ! ನನ್ನ ಮೇಲೆ ಕರುಣವಿಡು " ಎಂದು ಹೇಳಿದನಂತೆ. ಆದರೆ ವಿಚಾರಣೆ ನಡೆದನಂತರ ಕರುಣತೋರದೆ ಈ ' ಸತ್ಯ ' ವಂತನಿಗೆ 6 ತಿಂಗಳ ಕಠಿಣ ಸಜ ವಿಧಿಸಲಾಯಿತಂತೆ.

ಬಾರ್ಸಿಲೋನ ಎಲೆಕ್ಟ್ರಿಕ್ ರೈಲು ಸರಿಯಾಧಿ ಹತ್ತಿರ ಕಂಬಿ ತಪ್ಪಿ ಗಾಡಿಗಳು ಜೂರುಜೂರಾಗಿ 25 ಜನ ಸತ್ತರೆಂದೂ 108 ಜನ ಘಾಯಪಟ್ಟರೆಂದೂ ತಿಳಿದು ಬರುತ್ತದೆ.

———

ತೆನ್ನಾಲಿ ತಾಲ್ಲ್ಕು ಬೋರ್ಡ್ ಮೀಟಿಂಗಿನಲ್ಲಿ ಅದರಾವಿನ ಪ್ರಕಾರ ಆ ಬೋರ್ಡಿಗೆ ಸೇರಿದ ಸರಹದ್ದಿನಲ್ಲಿ ಹೆಂಡದಂಗಡಿಗಳಿರಕೂಡದೆಂದೂ ಈಚಲು ಮರಗಳಿಂದ ಹೆಂಡ ಇಳಿಸಕೂಡದೆಂದೂ ತೀರ್ಮಾನ.

———

ಮಹಾತ್ಮ ಗಾಂಧಿಯವರನ್ನು ನೋಡಲು ಡೊಡ್ಡ ಗುಂಪು ಗುಂಟೂರಿನ ರೈಲ್ವೆಸ್ಟೇಷನ್ನಲ್ಲಿ ಅವರು ಬಂದಾಗ ಹಾಜರಿದ್ದರು. ಆ ಪೈಕಿ ಪರದೇಶಿ ಬಟ್ಟೆ ಧರಿಸಿದ್ದ ಒಬ್ಬನು ತಾನು ' ಜನ್ಮಭೂಮಿ ' ವಿಷಯದಲ್ಲಿ ಪದ್ಯ ಹೇಳಲು ಮಹಾತ್ಮರ ಅಪ್ಪಣೆ ಕೇಳಿದನೆಂದೂ, ಅದಕ್ಕೆ ಅವರು ಪರದೇಶಿ ಬಟ್ಟೆ ಧರಿಸಿದವರಿಂದ ಹಾಡಲ್ಪಟ್ಟ ಪದ್ಯವನ್ನು ತಾವು ಕೇಳುವುದಿಲ್ಲವೆಂದೂ ತಿಳಿಸಿ, ಆತನಿಗೆ ತಾನು ಧರಿಸಿದ್ದ ಒಟ್ಟೆ ಸುಟ್ಟು ಖಾದಿಬಟ್ಟೆ ಧರಿಸೆಂದು ಹೇಳಿದರೆಂದೂ ಮದರಾಸಿನ ಪತ್ರಿಕೆಯೊಂದಕ್ಕೆ ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.

———

ಕೆಲವು ತರದ ಪಕ್ಷಿಗಳು ಸೊಳ್ಳೆಗಳನ್ನು ತಿಂದು ನಾಶಪಡಿಸುತ್ತವೆ. ಇದರಿಂದ ಮಲೇರಿಯ ಮೊದಲಾದ ರೋಗಗಳು ತಡೆಯಲ್ಪಡುವುವು. ಆದುದರಿಂದ ಪಕ್ಷಿಗಳನ್ನು ಕೊಲ್ಲುವುದು ಕಮ್ಮಿಮಾಡಬೇಕು.

——

ವಾಟ್ಟ ಮ್ಯುನಿಸಿಪಾಲಿಟಿಯ ಕಮಿಷನರ್ ಕೆಲಸಕ್ಕೆ ಬಿಹಾರದ ಮಂತ್ರಿಗಳಾಗಿದ್ದ ಮೆ|| ಮಧುಸೂದನ ದಾಸರ ಮಗಳಾದ ಶ್ರೀಶೈಲಬಾಲೆ ಎಂಬ ರಮಣಿಯು ನೇಮಿಸಲ್ಪಟ್ಟಿರುವಳು.

ಫ್ರಾನ್ಸು ದೇಶದಲ್ಲಿ ಭೋಗದ ತೆರಿಗೆಗಳಿಂದು ಒಂದು ಕಂದಾಯ ಹಾಕುವುದಕ್ಕೆ ಏರ್ಪಾಡಾಗಿದೆ. ಇಕಂಟ್ಯಾಕ್ಸ್ ದ್ವಿಗುಣಿಯಾಗಿ ಮಾಡಿರುವರು. ಭೋಗದ ಸಾಮಗ್ರಿಗಳಮೇಲೂ ಸಂಗೀತ ಸಾಹಿತ್ಯ ಮೊದಲಾದ ಖರ್ಚುಗಳಿ ದಿಲ್‌ಖುಷಿಗಳಮೇಲೂ ಕಂದಾಯವನ್ನು ಹಾಕಿ ಬಡವರಿಗೆ ತೊಂದರೆ ಇಲ್ಲದಂತೆ ದೇಶದ ಆಯತಿಯನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡುತ್ತಲಿರುವರು.

———

13 ನೇ ತಾರೀಖು ರಾತ್ರೆ ಪೊಲೀಸ್ ಇನ್‌ಸ್ಪೆಕ್ಟರು ಕೇಶವಂರಾಯರು ತಮ್ಮ ಶಿಬ್ಬಂದಿಗಳ ಸಮೇತ ಬೆಂಗಳೂರು ಬಳೇಪೇಟೆಯಲ್ಲಿ ಒಂದು ಮನೆಯಲ್ಲಿ ಪರೇಲವನ್ನು ಆಡುತ್ತಿದ್ದ 22ಜನಗಳನ್ನು ರೂ58-12-0 ಗಳ ಸಮೇತ ದಸ್ತಗಿರಿಮಾಡಿ ಅವರುಗಳನ್ನು ಜಾಮೀನಿನಮೇಲೆ ಬಿಟ್ಟಿರುತ್ತಾರೆ.

———

ಕೊಯಮತ್ತೂರಿನ ಒಬ್ಬ ಗೌಡನು ಲಕ್ಷ್ಮಿ ರಾಮಿ ಎಂಬ ಅಕ್ಕತಂಗಿಯರನ್ನು ಸ್ವಹಸ್ತದಿಂದ ಖೂನಿಮಾಡಿದ್ದಕ್ಕಾಗಿ ದಸ್ತಗಿರಿಮಾಡಲ್ಪಟ್ಟಿರುವನು. ಲಕ್ಷ್ಮಿಯು ಅತನ ಹೆಂಡತಿ. ರಾಮಿಯು ಆಕೆಯ ತಂಗಿ. ಈ ಕೊಲೆಪಾತುಕಕ್ಕೆ ಕುಡುಕತನವೇ ಕಾರಣವೆಂದು ತಿಳಿದುಬರುತ್ತೆ.

——

ಒರಿಸ್ಸಾ ಬಿಹಾರದ ಸರ್ಕಾರದವರು ಸ್ವಲ್ಪ ದಿನಗಳ ಹಿಂದೆ ಹಿಂದೂ ದೊಡ್ಡಮನುಷ್ಯರಿಬ್ಬರನ್ನು ವಾಟ್ಟ ರೈಲು ಸ್ಟೇಷನಿನಲ್ಲಿ ಇಬ್ಬರು ಯೂರೊಪಿಯನರು ಅವಮಾನಪಡಿಸಿದ್ದಕ್ಕಾಗಿ ಕ್ರಮ ಜರುಗಿಸಬೇಕೆಂದಿದ್ದಾರೆಂದು ಕಲ್ಕತ್ತೆ ಪತ್ರಿಕೆ ತಿಳಿಸುತ್ತೆ.

——

ಟೀ ಕುಡಿಯುವುದಕ್ಕಿಂತ ಕೊತ್ತಂಬರಿ ಪುಡಿಗೆ ಸಕ್ಕರೆ ಹಾಕಿಕೊಂಡು ಟೀಯಂತೆ ತಯಾರಿಸಿ ಕುಡಿಯುವುದು ಉತ್ತಮವೆಂದು ಮಹಾತ್ಮರ ಅನುಭವ.

——

ಸೋನಗಿರಿಯಲ್ಲಿ ಕೈಬಸ್ತರಾದ ಕೆಲವು ಬ್ರಾಹ್ಮಣರನ್ನು ಶ್ರೀಶಂಕರಾಚಾರ್ಯರ ಅಪ್ಪಣೆಯಿಂದ ಪುನಃ ಶುದ್ಧೀಕರಿಸಲಾಗಿದೆಯಂತೆ.

ಬರೋಡ ಮಹಾರಾಜರಿಗೆ ರಾಜ್ಯಪಟ್ಟಾಭಿಷೇಕವಾಗಿ 50 ವರುಷಗಳಾದುವು. ಮೆ 27ಕ್ಕೆ ಅತಿ ಭಣೆಯಿಂದ ಉತ್ಸವಾದಿಗಳು ನಡೆಯುವು

ಮೂರನೆ ತರಗತಿ ಪ
ಮಾಡಲು ತಂದಿದ್ದ ತರ
ಜೂರಾಗಿದೆ.

ಬೊಂಬಾಯಿನಲ್ಲಿ
ಬಾವ್ಜಾ ಎಂಬುವನ
ಯಾದಿಗಳು ಹಕ
ಅರ್ಜಿ ಹಾಕಿದ್ದಾ
ಮಂತಾಜಬೇಗಂ ಕ
ಲಕ್ಷ ರೂಪಾಯಿಗೆ
ಬ ವರ್ತಮಾನವಿದ್ದ
ದಿಲ್ಲವಾಗಿಯೂ
ಮಾಶ್ರಯ ಪಡೆದು

ವೊಕ್ಕ್ಯಾಲ್ರುಗಳು.

——

ನಮ್ಮ ಸಂಸ್ಥಾನಾಮಳೆಯಲ್ಲಿ ಅನೇಕ ವಿಧವಾದ ಜೀವನೋಪಾಯಗಳಿಂದ ಪ್ರಜೆಗಳು ಜೀವಿಸುತ್ತಿರುವುದು ಸರಿಯಷ್ಟೆ. ಆಯಾಯ ಜೀವನೋಪಾಯಕ್ಕನುಸಾರವಾದ ಬುದ್ಧಿ ಕುಶಲತೆ ಇದ್ದೇಯಿರುವುದು. ಅದರೆ ಕುಶಲತೆ ನೈಪುಣ್ಯದಲ್ಲಿ ವ್ಯತ್ಯಾಸವಿದ್ದಹಾಗೆಲ್ಲ ನರ ಮಾನವೂ ವ್ಯತ್ಯಾಸವಾಗಿಯೇ ಆಗುವುದು. ಎಲ್ಲ ಪ್ರಜೆಗಳಿಗೂ ಸಮಾನವಾದ ಬುದ್ಧಿ ಕುಶಲತೆ ಇರುವುದು ಅಪೂರ್ವ. ಕೆಲವರು "ಅಭ್ಯಾಸಸಾರಿನೀ ವಿದ್ಯಾ" ಎಂಬಂತೆ ಬರಿ ಅಭ್ಯಾಸದಿಂದಲೇ ಪ್ರವೀಣತೆಯನ್ನು ಹೊಂದುವರು. ಅದುದರಿಂದಲೇ ಪೂರ್ವಕವು ಸೂಡಿರುವ ಗಾದೆಯೊಂದು ನೆನಪಿಗೆ ಬರುತ್ತೆ. "ಹೊಸ ವೈದ್ಯನಿಗಿಂತ ಹಳೇ ರೋಗಿ ಮೇಲು" ಇದು ಈಗಿನ ವಿಶ್ವವಿದ್ಯಾಲಯದಲ್ಲಿ ತೇರ್ಗಡೆಹೊಂದಿರವವರಿಗೆ ಬಹು ಹಾಸ್ಯಾಸ್ಪದವಾಗಿ ತೋರಿ ಬರಬಹುದು. ಅಂತಹ ಅನೇಕರಿಗೂ ಸಹ ಸ್ವಾನುಭವದಲ್ಲಿ ಇದು ನಿಜವೆಂಬುದು ತಿಳಿದೇ ಇರುವುದು. ಹೀಗಿರುವಲ್ಲಿ ಈಗಿನ ವೊಕ್ಕ್ಯಾಲ್ರುಗಳ ವಿಷಯವೊಂದು ವಿಚಾರಣೀಯವಾದಂಶವಾಗಿದೆ.

ನಮ್ಮ ಸಂಸ್ಥಾನದಲ್ಲಿ ಎಲ್ಲಾ ವ್ಯಾಪಾರಕ್ಕಿಂತಲೂ ಲೇವಾದೇವಿ ವ್ಯಾಪಾರವು ಹೆಚ್ಚು ಲಾಭಕರವೆಂಬ ಭಾವನೆಯಿಂದ ಅನೇಕರು ಈ ವ್ಯಾಪಾರಕ್ಕೆ ಹೊರಟಿರುವರು. ಇದನ್ನು ಕಂಡು ಪರಸ್ಥಳದ ಬಂಡವಾಳಸ್ಥರೂ ಕೂಡ ತಂಡೋಪತಂಡವಾಗಿ ಬಂದು ನೆಲಸಿ ಸ್ಥಳೀಯರೊಬ್ಬಿಬ್ಬರನ್ನು ಒಳಹಾತಿಕೊರಿಡು ಪ್ರಜೆಗಳನ್ನು ಮುತ್ತಿಗೆ ಹಾಕಿ ಧ್ವಂಸಮಾಡುವುದರಲ್ಲುದ್ಯುಕ್ತರಾಗಿರುವುದು ಅನುಭವ ಸಾಧ್ಯವಾಗಿರುತ್ತದೆ. ಇಂತಹ ವ್ಯಾಪಾರ ಹೆಚ್ಚಿದಹಾಗೆಲ್ಲ ಸಿವಿಲ್ ಮತ್ತು ಕ್ರಿಮಿನಲ್ ವೊಕದ್ದಮೆಗಳು ಹೆಚ್ಚುತ್ತ ಅದಕ್ಕನುಸಾರವಾಗಿ ಕೋರ್ಟುಗಳೂ ಹೆಚ್ಚುತ್ತಾ ಬಂದಿರುವುದು ನಿದರ್ಶನರೂಪವಾಗಿರುತ್ತೆ. ಕೋರ್ಟು ಕಛೇರಿಗಳ ಸಹಾಯವಾಗಿ ನ್ಯಾಯ ವಿಮರ್ಶನಕ್ಕೆ ನವಿಧ [illegible] ಪ್ಲೀಡರ್, ಅಟಾರ್ನಿ, ಬ್ಯಾರಿಸ್ಟರ್ [illegible] ಇದ್ದ ಪರೀಕ್ಷೆಗಳನ್ನು ಮಾಡಿಕೊಂಡು ಕಕ್ಷಿ [illegible] ವಾಗಿ ನಿಂತು ವಾದಿಸಿ ತಮ್ಮ ಸಾಮ್ಯ [illegible] ಗಳಿಸುತ್ತಿರುವುದು ಎಲ್ಲರಿಗೂ [illegible] ಈ ಸಮೂಹದಲ್ಲಿ [illegible] ಅಲ್ಪ ವೊಕ್ಕ್ಯಾಲ್ರುಗಳು" "ಅಭ್ಯಾಸವಿದ್ಯಾ" ಬಲ [illegible] ತಾಂರಿಗೆ ಸಹಾಯ [illegible] ಲೆಮಲೆ ಕಾಯಿನಂತೆ [illegible] ಸ್ಪರ್ಧಿಮೆ ಹೆಚ್ಚಿದ [illegible] ಕ್ಷಿಗಾರರು ಹೆಚ್ಚು [illegible] ದ್ರವ್ಯಾಂಧರಾದ [illegible] ವುದಿಲ್ಲ. ಕಕ್ಷಿಗಾರ [illegible] ಕ್ಕಿಗುವುದಿಲ್ಲ. ಆದು [illegible] ತಕ್ಕ್ಯನುಸಾರ ತಮ್ಮ ವಕೀಲರನ್ನು ನೇಮಿಸಿಕೊಂಡು ಫಲಾಫಲವನ್ನು ತಮ್ಮ ಅದೃಷ್ಟಾನುಸಾರ ಹೊಂದುತ್ತಲಿರುವರು. ಹೀಗಿರುವಲ್ಲಿ ಈಗ ವೊಕ್ಕ್ಯಾಲ್ರುಗಳ ವಿಷಯದಲ್ಲಿ ನಮ್ಮ ಘನಹೊಂದಿದ ಜೀಫ್ ಕೋರ್ಟಿನಿಂದ ಒಂದು ಹೊಸ ಪ್ರೊಸಿಡಿಂಗ್ಸು ಹುಟ್ಟಿರುವುದು ಅವರುಗಳ ಮೇಲೆ ಜ್ಯೇಷ್ಠಮಾಸದಲ್ಲಿ ಸಿಡಿಲು ಬಡಿದಂತೆ ಆಗಿರುತ್ತೆ. ಇದರಿಂದ ವೊಕ್ಕ್ಯಾಲ್ರುಗಳೆಲ್ಲಾ ಯೋಚನಾಪರರಾಗಿರಬಹುದು. ಇವರುಗಳು ಇತ್ಪಕ್ಕೇನೇ ಧೈರ್ಯಗುಂದದಿರಬೇಕು. ನಮ್ಮ ಘನ ಚೀಫ್ ಜಡ್ಜಿಯವರ ತಂದೆಯವರಾದ ಶ್ರೀಮಂತ ಫ್ಲಮರ್‌ರವರು 1885 ರಲ್ಲಿ 40 ವರುಷಗಳ ಹಿಂದೆಯೇ ವೊಕ್ಕ್ಯಾಲ್ರುಗಳೆಲ್ಲಾ ಮ್ಯಾಜಿಸ್ಟ್ರೇಟು ಕೋರ್ಟುಗಳಲ್ಲಿ ಹಾಜರಾಗಬಹುದೆಂದು ಸರ್ಕ್ಯುಲರ್ ಕೊಟ್ಟು ಅದರಂತೆ ಜಾರಿಯಲ್ಲಿರುತ್ತೆ. ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿಯೂ ಸಹ 'ಪ್ಲೀಡರ್' ಎಂಬ ಸಂಕೇತದಲ್ಲಿ 'ವೊಕ್ಕ್ಯಾಲ್ರು' ಸಹ ಸಮೂಹದು ಮಾಡಲ್ಪಟ್ಟಿರುತ್ತೆ. ಮತ್ತು 1923 ನೇ ಇಸವಿ ಅಮೆಂಡುಮೆಂಟಿನಲ್ಲಿ ಇಂಡಿಯ ಸರ್ಕಾರದವರೂ 'ವೊಕ್ಕ್ಯಾಲ್ರ್' ಎಂಬುವರನ್ನು ಪ್ಲೀಡರ ಜೊತೆಗೆ ಸ್ಪಷ್ಟವಾಗಿ ಸೇರಿಸಿ ಮ್ಯಾಜಿಸ್ಟ್ರೇಟರ ಅಪ್ಪಣೆಯಿಲ್ಲದೇನೆ ವಾದಿಸಬಹುದೆಂಬ ಅಂಶಕ್ಕೆ ಅನುಸಾರವಾಗಿ ಶಾಸನವನ್ನು ತಿದ್ದುಪಾಟು ಮಾಡಿರುತ್ತಾರೆ. ಅದುದರಿಂದ ಇಂಡಿಯ ಸರ್ಕಾರದವರು ೨ ತಿದ್ದುಪಾಟು ಮಾಡುವಾಗ ಈ ವೊಕ್ಕ್ಯಾಲ್ರುಗಳು ಬಡವರಿಗಾಧಾರಿಗಳು ಎಂಬುದನ್ನು ಮನವಲ್ಲಿಟ್ಟು ಆ ರೀತಿ ತಿದ್ದುಪಾಟು ಮಾಡಿರುವಂತೆ ಸ್ಪಷ್ಟವಾಗುತ್ತದೆ. ಹೀಗಿರುವಲ್ಲಿ ಈಗ ಪ್ರತಿ ವರುಷವೂ ಹೊಸ ಹೊಸದಾಗಿ ಬಿ. ಎಲ್; ಎಲ್. ಎಲ್. ಬಿ. ಪ್ಲೀಡರಪರೀಕ್ಷೆಗಳನ್ನು ಪ್ಯಾಸುಮಾಡಿಕೊಂಡುಬಂದು ಲಾಯರು ಸಂಖ್ಯೆಗಳು ಹೆಚ್ಚುತ್ತಾ ಬಂದಹಾಗೆಲ್ಲಾ ಈ ವೊಕ್ಕ್ಯಾಲ್ರುಗಳ ವರಮಾನವೂ ಕಮ್ಮಿಯಾಗುತ್ತ ಬಂದು ತಮ್ಮ ಜೀವನೋಪಾಯಕ್ಕೆ ಬೇರೆ ಯೋಚನೆ ಮಾಡುವ ಕಾಲ ಒದಗುತ್ತಾ ಬಂದಿರುತ್ತೆ. ಆದರೂ ಹಳಬರಾಗಿರುವವರಲ್ಲಿ ಎಷ್ಟೋ ಜನ ಕಕ್ಷಿಗಾರರು ನಂಬುಗೆ ಇಟ್ಟು ತಮ್ಮ ಮತ್ತು ತಮ್ಮಪರ ವೊಕದ್ದಮೆಗಳನ್ನು ಕೊಟ್ಟು ನಡೆಸುತ್ತಾ ಇರುವುದು ಈಗಲೂ ವಾಡಿಕೆಯಲ್ಲಿದೆ. ಎಲ್ಲರನ್ನೂ ಸಮದೃಷ್ಟಿಯಿಂದ ನೋಡುತ್ತಲಿರುವ ನಮ್ಮ ದಯಾರ್ದ್ರ ಹೃದಯರಾದ ಘನ ಚೀಫ್ ಜಡ್ಜಿಯವರು ಈ ವೊಕ್ಕ್ಯಾಲ್ರುಗಳ ಅಹವಾಲನ್ನು ಕೇಳಿ ಈಗ ದಯಪಾಲಿಸಿರುವ ಸರ್ಕ್ಯುಲರನ್ನು ಮುಂದಕ್ಕೆ ವೊಕ್ಕ್ಯಾಲ್ರಾಗದೇಕೆಂದಿರುವವರಿಗೆ ಅನುಮೋದಿಸುವಂತೆ ಹುಕುಂ ದಯಪಾಲಿಸುವರೆಂದು ನಂಬಿರುತ್ತೆ.

ಆದುದರಿಂದ ವೊಕ್ಕ್ಯಾಲ್ರುಗಳೆಲ್ಲಾ ಒಂದು ವಿಾಟಿಂಗು ಮಾಡಿಕೊಂಡು ತಮ್ಮಗಳ ಕೋರಿಕೆಯನ್ನು ಅಹವಾಲಾಗಿ ತಮಗೆ ಸಹೋದರಭಾವದಿಂದಿರುವ ವಿದ್ಯಾಪ್ರಾಪ್ತಿಮೆಯುಳ್ಳ ಮುಖಂಡರಾದವರನ್ನು ಮುಂದಿಟ್ಟುಕೊಂಡು ನಮ್ಮ ಸರ್ವಸಮದೃಷ್ಟಿಯುಳ್ಳ ನ್ಯಾಯಮೂರ್ತಿಯಾದ ಘನ ಚೀಫ್ ಜಡ್ಜಿಯವರಲ್ಲಿ ವಿನ್ನವಿಸಿಕೊಂಡಲ್ಲಿ ದಯಾರ್ದ್ರಹೃದಯರಾದ ಅವರು ಪರ್ಯಾಲೋಚಿಸದೆ ಇರರು.

ಈಗಿನ ಕಲಿಕಾಲದಲ್ಲಿಯೂ ಧರ್ಮಪರಾಯಣರು ಇಲ್ಲದೆ ಇರುವುದಿಲ್ಲ. ಅದುದರಿಂದ ವಿದ್ಯಾವಿಶಾರದರಾದವರಿಗೆ ನಿಸ್ಸಹಾಯಕರಾದ ವೊಕ್ಕ್ಯಾಲ್ರು ಭ್ರಾತೃವರ್ಗದವರ ಕಾರಣವನ್ನಂಗೀಕರಿಸಿ ಅವರನ್ನು ಕ್ಷಮಸ್ಥಿತಿಗೆ ತರುವ ಪ್ರಯತ್ನ ಮಾಡಲು ಸಕಾಲವಾಗಿರುತ್ತೆ.

ತಾರೀಖು ೧೬ನೆಯ 'ವೆಲ್ಫ್ ಆಫ್ ಮೈಸೂರು' ಪತ್ರಿಕೆಯಲ್ಲಿ 'ವೊಕ್ಕ್ಯಾಲ್ರು' ನಾಮಾಂಕಿತವಾಗಿ ಬರಿದಿರುವ ಲೇಖನದ ಅಭಿಪ್ರಾಯವು ವೊಕ್ಕ್ಯಾಲ್ರಿಗೆ ಆತ್ಮಹತ್ಯವಾಗಿ ಬರೆದುದೆಂದು ಹೇಳಲಾಗುವುದಿಲ್ಲ. ಕಾರಣವನ್ನು ವಾಚಕರೇ ಊಹಿಸಬಹುದು.

ಗಂಟೆಗೆ 260 ಮೈಲಿ ಹೋಗುವ ಜೂಪಿನ ಏರೋ[illegible] ಪ್ಲೇನ್ ತಯಾರಾಗುತ್ತಿದೆ.

——

ಕಲ್ಕತ್ತಾದ ಬಾರಾ ಬಜಾರಿನಲ್ಲಿ ಒಂದು ಮ[illegible] ಕುಸಿದು ಬಿದ್ದು 3 ಜನರು ಸತ್ತರು; ಅನೇಕರಿಗೆ ಗಾ[illegible] ಯವಾಯಿತು.

——

ತಂಜಾವೂರು ಡಿಸ್ಟ್ರಿಕ್ಟ್ ಬೋರ್ಡಿನವರ ಯಾ[illegible] ಮೊನಿಕೆಯಲ್ಲಿರತಕ್ಕ ಸ್ಕೂಲುಗಳಲ್ಲಿ ಹಿಂದೀ ವಾ[illegible] ವನ್ನು ಖಡ್ಡಾಯವಾಗಿ ಹೇಳಿಕೊಡತಕ್ಕದೆಂದು ತೀರ್ಮಾನ.

—0—

ಭೂಪೇಂದ್ರಬಾಸುಯವರ ಸ್ಮಾರಕ ನಿಧಿ[illegible] ಲಾರ್ಡ್ ರೆಡಿಂಗ್‌ರವರು 250 ರೂಪಾಯಿಗಳನ್ನು ಕೊಟ್ಟಿರುತ್ತಾರೆ.

——

ಮಾರ್ಡ್ಯವಲ್ಲಿ ಜಂಡೂ ಪಂಚಮುರಿಗೂ, ಕ್ರಿಶ್ಚಿಯನರಾಗಿರತಕ್ಕ ಪಂಚಮರಿಗೂ ಜಗಳ ವ್ಯಾರಂಭವಾಗಿ ಎಡಪಡನೆಯವರು ಮೊದಲನೆಯವರನ್ನು ತಮ್ಮೂರಿಂದ ಜಾತಿ ಕೆಡಬೇಕೆಂದು ತಿಳಿಸಿ ಅವರ ಮನೆಗಳ ಮೇಲೆ ಕಲ್ಲು ಎಸೆಯುತ್ತಿದ್ದಾರೆಂದು ವರ್ತಮಾನ.

——

14 ಕೊಗಲಿನ ಗಡಂಗುಗಳು ಕೆಲಸಗಾರರು ಹೆಚ್ಚು ಸಂಬಳ ಬೇಕೆಂದು ಮುಷ್ಕರ ಹಿಡಿದು ಕೆಲಸ ಬಾರದೆ ನಿಂತಿರುವುದರಿಂದ ಮುಚ್ಚಲ್ಪಟ್ಟಿವೆ. 40[illegible] ಜನರು ಕೆಲಸ ಬಿಟ್ಟು ಸೋಮಾರಿತನದಿಂದಿದ್ದಾರೆ.

——

ಇಂಡಿಯಾ ದೇಶದ ಆರ್ಥಿಕ ವಿಷಯ ವಿಚಾರ[illegible] ಕಮಿಟಿಗೆ ನಮ್ಮ ಮೈಸೂರಿನವರಾಗಿದ್ದ ಮ|| ರಾ[illegible] ವಿಶ್ವೇಶ್ವರಯ್ಯನವರು ಅಧ್ಯಕ್ಷರು.

——

ರಜದಮೇಲೆ ಸೇವೆಗೆ ಪ್ರಯಾಣಮಾಡಿರು[illegible] ನಮ್ಮ ಘನವನ್ನು ಹೊಂದಿದ ವೈಸರಾಯರಾ[illegible] ಲಾರ್ಡ್ ರೆಡಿಂಗ್‌ರವರು ತಾವು ಕೆಲಸದಿಂದ ನಿವೃತ್ತಿ ಹೊಂದುವುದಕ್ಕೆ ಪೂರ್ವ ರಾಜಕೀಯ ವಿಷ[illegible] ಗಳನ್ನು ಸಮಾಧಾನಪಡಿಸುವುದು ತಮ್ಮ ಕರ್ತವ್ಯವೆಂದಭಿಪ್ರಾಯಪಟ್ಟಿರುವುದರಿಂದ ಈ ಸಂಕೇತ[illegible] ಗೂಡುವವರೆಗೂ ವೈಸರಾಯಿ ಪದವಿಯನ್ನು ಸ್ವೀಕರಿಸಲು ಒಪ್ಪಿರುತ್ತಾರೆಂದು ಹಿಂದೂ ಪತ್ರಿಕೆಯು [illegible] ಟಿಸಿರುತ್ತೆ.